# ನಗೆ ಹೂವು ಬಾಡದಿರಲಿ...

## ಆ್ಯಸಿಡ್ ಎರಚುವ ವಿಕೃತಿಗೆ ಸಮಾಜ ಒಕ್ಕೊರಲಿನಿಂದ ಹೇಳಬೇಕಿದೆ ಧಿಕ್ಕಾರ

ಹೆಣ್ಣಿನ ಮುಖವನ್ನು ಆಕೆಯ ಸೃಜನಶೀಲತೆಯ ಸುಂದರ ಅಭಿವ್ಯಕ್ತಿ ಎಂದು ಭಾವಿಸಲಾಗುತ್ತದೆ. ಅಂಥ ಹೆಣ್ಣನ್ನು ಕುರೂಪಗೊಳಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ. ಕುಟುಂಬದ ಹಾಗೂ ಸಮಾಜದ ಆರೋಗ್ಯದ ಅಭಿವ್ಯಕ್ತಿಯ ರೂಪದಲ್ಲೂ ನೋಡಬಹುದಾದ ಹೆಣ್ಣಿನ ಮುಖದ ಮೇಲೆ ಆ್ಯಸಿಡ್ ಎರಚುವ ವಿಕೃತಿ ಸಮಾಜದಲ್ಲಿದೆ. ಬಹುತೇಕ ಬಂಧುಮಿತ್ರರಿಂದಲೇ ನಡೆಯುವ ಈ ದಾಳಿಗಳು, ಹೆಣ್ಣನ್ನು ಜೀವನಪೂರ್ತಿ ಯಾತನೆಯಕೂಪಕ್ಕೆ ತಳ್ಳುತ್ತವೆ. ದುರಂತದ ನಂತರವೂ ಕೆಲವು ಹೆಣ್ಣುಮಕ್ಕಳು ಬದುಕನ್ನು ಕಟ್ಟಿಕೊಳ್ಳುವ ದಿಟ್ಟತನ ಪ್ರದರ್ಶಿಸಿದ್ದಾರೆ. ಅಂಥ ಹೆಣ್ಣುಮಕ್ಕಳ ಸಾಹಸದ ಕಥೆಯೊಂದಿಗೆ, ಆ್ಯಸಿಡ್ ದಾಳಿಯ ಜಾಗತಿಕ ವಿಕೃತಿಯನ್ನು ಚಿತ್ರಿಸುವ ಈ ಬರಹದ ಆಶಯ ಇಷ್ಟೇ – ಚೆಲುವನ್ನು ಕೊನೆಗೊಳಿಸುವ ಪ್ರಯತ್ನಗಳು ಇನ್ನಾದರೂ ನಿಲ್ಲಲಿ; ನಗು ಚಿರಾಯುವಾಗಿರಲಿ.

■ ಮಹತಿ

**ಕತ್ತರಿಸುವವನ ಕೈಯಲ್ಲಿ ಒಂದೇ ಕತ್ತಿ**
**ಚಿಗುರಿಕೊಳ್ಳುವವರಿಗೆ ನೂರಾರು ದಾರಿ**

